# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1438 (1547) |
| ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 19/12/2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಳೆ ಹೆಚ್ಚಾಗಿರುವುದರಿಂದ ನಾಶವಾಗಿರುವ ಕೃಷಿ ಪ್ರದೇಶದ ಬೆಳೆಗಳು ಯಾವುವು: ಅತಿಯಾದ ಮಳೆಯಿಂದ ಬೆಳೆ ನಾಶವಾಗುತ್ತಿರುವುದಕ್ಕೆ ಸರ್ಕಾರದಿಂದ ಬಗೆಹರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ: (ಸಂಪೂರ್ಣ ಮಾಹಿತಿ ಜಿಲ್ಲಾವಾರು ನೀಡುವುದು): | ರಾಜ್ಯದಲ್ಲಿ ಮಳೆ ಹೆಚ್ಚಾಗಿರುವುದರಿಂದ ತೊಗರಿ, ಹತ್ತಿ ಹೆಸರು. ಮೆಕ್ಕೆಜೋಳ, ಸೋಯಾಬಿನ್, ಉದ್ದು, ಕಬ್ಬು, ಭತ್ತ ಸಜ್ಜೆ ಕಡಲೆಕಾಯಿ, ಸೂರ್ಯಕಾಂತಿ, ಜೋಳ, ರಾಗಿ, ಎಳ್ಳು, ಗೋವಿನಜೋಳ, ನವಣೆ, ತಂಬಾಕು ಮುಂತಾದ ಕೃಷಿ ಬೆಳೆಗಳು ಮತ್ತು ಈರುಳ್ಳಿ ಕೆಂಪು ಮೆಣಸಿನಕಾಯಿ, ಮೆಣಸು, ಹಸಿರು ಮೆಣಸಿನಕಾಯಿ ಮುಂತಾದ ತೋಟಗಾರಿಕೆ ಬೆಳೆಗಳು ಹಾನಿಯಾಗಿರುತ್ತವೆ.<br><br>ರಾಜ್ಯದಲ್ಲಿ ಅತಿವೃಷ್ಟಿಯಿಂದ ಬೆಳಹಾನಿಯಾಗಿರುವುದಕ್ಕೆ ಕೇಂದ್ರ ಗೃಹ ಮಂತ್ರಾಲಯದ ಮಾರ್ಗಸೂಚಿಗಳನ್ವಯ ಇನ್ಪುಟ್ ಸಬ್ಸಿಡಿಯನ್ನು ಪಾವತಿಸುವುದರ ಜೊತೆಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ಹೆಕ್ಟೇರ್ 1 ಕ್ಕೆ ರೂ.8500/-ಗಳಂತೆ 2 ಹಕ್ಟೇರ್ ಗೆ ಸೀಮಿತಗೊಳಿಸಿ ಇನ್ಪುಟ್ ಸಬ್ಸಿಡಿಯನ್ನು ಪಾವತಿಸಲಾಗಿರುತ್ತದೆ. ಜಿಲ್ಲಾವಾರು ಪಾವತಿಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಕೃಷ್ಣಾ ನದಿಯಿಂದ ಹಾಳಾಗಿರುವ ಬೆಳೆಗಳು ಯಾವುವು: ಮತ್ತು ಬೆಳೆಗಳಿಗೆ ಸರ್ಕಾರದಿಂದ ನಷ್ಟ ಪರಿಹಾರ ನೀಡಲಾಗಿದೆಯೇ: ನೀಡಿದ್ದಲ್ಲಿ ಎಷ್ಟು ಹಣ ನೀಡಲಾಗಿದೆ: ನೀಡಲ್ಲವೆಂದರೆ ಸರ್ಕಾರ ಪರಿಹಾರ ನೀಡಲು ಚಿಂತಿಸಿದೆಯೇ: (ಸಂಪೂರ್ಣ ಮಾಹಿತಿ ನೀಡುವುದು) | ಕೃಷ್ಣ ನದಿ ಪ್ರವಾಹದಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಕೃಷಿ ಬೆಳೆಗಳಾದ ಕಬ್ಬು, ಉದ್ದು, ಹೆಸರು, ಮೆಕ್ಕೆಜೋಳ, ಸೂರ್ಯಕಾಂತಿ ಮತ್ತು ತೊಗರಿ ಹಾಗೂ ತೋಟಗಾರಿಕೆ ಬೆಳೆಗಳಾದ ಈರುಳ್ಳಿ, ಬದನೆಕಾಯಿ, ಸೌತೆಕಾಯಿ, ತಾಳೆಬೆಳೆ, ದ್ರಾಕ್ಷಿ ಮತ್ತು ಬಾಳೆ ಬೆಳೆ ಹಾನಿಯಾಗಿರುತ್ತವೆ.<br>ವಿಜಯಪುರ ಜಿಲ್ಲೆಯಲ್ಲಿ ತೊಗರಿ, ಗೋವಿನಜೋಳ, ಸಜ್ಜೆ ಹತ್ತಿ, ಸೂರ್ಯಕಾಂತಿ, ಹೆಸರು, ಉದ್ದು, ಕಬ್ಬು, ಸೋಯಾಬಿನ್ ಮತ್ತು ಶೇಂಗಾ ಬೆಳೆ ನಾಶವಾಗಿರುತ್ತವೆ. |

| | | |
|---|---|---|
| | | ಕೃಷ್ಣ ನದಿ ಪ್ರವಾಹದಿಂದ ಬೆಳೆಹಾನಿಯಾಗಿರುವ ಬಗ್ಗೆ SDRF/NDRF Norms ಪ್ರಕಾರ ನೀಡಿರುವ ಇನ್ಪುಟ್ ಸಬ್ಸಿಡಿಯ ಜೊತೆಗೆ ರಾಜ್ಯ ಸರ್ಕಾರದಿಂದ ಹೆಕ್ಟೇರ್ 1 ಕ್ಕೆ ರೂ.8500/- ಗಳಂತೆ 2 ಹೆಕ್ಟೇರ್ ಗೆ ಸೀಮಿತಗೊಳಿಸಿ ಹೆಚ್ಚುವರಿ ಇನ್ಪುಟ್ ಸಬ್ಸಿಡಿಯನ್ನು ಪಾವತಿಸಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಇ) | ರಾಜ್ಯದಲ್ಲಿ ಅತಿ ಮಳೆಯಿಂದ ಬೆಳೆ ಹಾನಿಯಾಗಿರುವುದರಿಂದ ರೈತರು ಪಡೆದ ಸಾಲವನ್ನು ಸರ್ಕಾರ ಮನ್ನಾ ಮಾಡುವ ಬಗ್ಗೆ ಚಿಂತಿಸಿದೆಯೇ? | ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: AGRI/347/ACT/2025

(ಎನ್. ಚಲುವರಾಯಸ್ವಾಮಿ)

ಕೃಷಿ ಸಚಿವರು

ಅನುಬಂಧ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1438 (1547) ಕ್ಕೆ

2025 ರ ನೈಋತ್ಯ ಮುಂಗಾರು ಅವಧಿಯ ಬೆಳೆಹಾನಿ ಮತ್ತು ಪರಿಹಾರ ಪಾವತಿಯ ವಿವರ (Input subsidy)

| ಕ್ರ. ಸಂ. | ಜಿಲ್ಲೆ | ಪರಿಹಾರ ಪಾವತಿಸಿದ ರೈತರ ಸಂಖ್ಯೆ | SDRF ನಿಯಮಗಳ ಅನ್ವಯ ಪಾವತಿಸಿರುವ ಪರಿಹಾರ ರೂ.ಲಕ್ಷಗಳಲ್ಲಿ | ರಾಜ್ಯ ಸರ್ಕಾರದಿಂದ ಹೆಕ್ಟೇರ್ 1ಕ್ಕೆ ರೂ. @8500/- ರಂತೆ ಪಾವತಿಸಿರುವ ಪರಿಹಾರ ರೂ.ಲಕ್ಷಗಳಲ್ಲಿ | ಒಟ್ಟು ಪರಿಹಾರ ಪಾವತಿ ರೂ.ಲಕ್ಷಗಳಲ್ಲಿ |
|---|---|---|---|---|---|
| 1 | ಬಾಗಲಕೋಟೆ | 113877 | 8749.65 | 5657.88 | 14407.53 |
| 2 | ಬಳ್ಳಾರಿ | 1641 | 143.60 | 73.75 | 217.34 |
| 3 | ಬೆಳಗಾಂ | 87571 | 6464.85 | 5124.48 | 11589.33 |
| 4 | ಬೀದರ್ | 192061 | 13899.14 | 13798.93 | 27698.06 |
| 5 | ಚಾಮರಾಜನಗರ | 13 | 0.78 | 0.42 | 1.20 |
| 6 | ಚಿಕ್ಕಬಳ್ಳಾಪುರ | 18 | 1.42 | 0.83 | 2.25 |
| 7 | ಚಿಕ್ಕಮಗಳೂರು | 33 | 1.24 | 0.90 | 2.14 |
| 8 | ಚಿತ್ರದುರ್ಗ | 769 | 70.06 | 39.88 | 109.94 |
| 9 | ದಕ್ಷಿಣ ಕನ್ನಡ | 244 | 9.38 | 7.26 | 16.63 |
| 10 | ದಾವಣಗೆರೆ | 550 | 26.42 | 26.25 | 52.67 |
| 11 | ಧಾರವಾಡ | 66145 | 6495.82 | 6377.46 | 12873.29 |
| 12 | ಗದಗ | 80321 | 9184.82 | 7581.71 | 16766.53 |
| 13 | ಹಾಸನ | 2010 | 233.33 | 91.60 | 324.93 |
| 14 | ಹಾವೇರಿ | 34157 | 1483.14 | 1434.81 | 2917.96 |
| 15 | ಕಲಬುರಗಿ | 323318 | 25097.21 | 24775.82 | 49873.03 |
| 16 | ಕೊಡಗು | 20 | 0.31 | 0.31 | 0.62 |
| 17 | ಕೊಪ್ಪಳ | 3593 | 334.64 | 189.55 | 524.19 |
| 18 | ಮಂಡ್ಯ | 205 | 12.08 | 6.60 | 18.68 |
| 19 | ಮೈಸೂರು | 180 | 9.36 | 5.38 | 14.74 |
| 20 | ರಾಯಚೂರು | 78835 | 3525.45 | 3386.99 | 6912.44 |
| 21 | ಶಿವಮೊಗ್ಗ | 7038 | 288.23 | 249.22 | 537.45 |
| 22 | ತುಮಕೂರು | 3 | 0.15 | 0.08 | 0.22 |
| 23 | ಉಡುಪಿ | 358 | 13.68 | 9.04 | 22.72 |
| 24 | ಉತ್ತರ ಕನ್ನಡ | 642 | 27.82 | 20.04 | 47.87 |
| 25 | ವಿಜಯನಗರ | 472 | 38.14 | 25.67 | 63.81 |
| 26 | ವಿಜಯಪುರ | 305675 | 33338.19 | 24740.97 | 58079.16 |
| 27 | ಯಾದಗಿರಿ | 121866 | 12352.86 | 9559.39 | 21912.25 |
| | **ಒಟ್ಟು** | **1421615** | **121801.77** | **103185.23** | **224987.003** |

ಆಯುಕ್ತರು,
ಕೆಎಸ್‌ಡಿಎಂಎ & ಡಿಎಸ್‌ಎಸ್‌ಪಿ
ಕಂದಾಯ ಇಲಾಖೆ